ಕರ್ನಾಟಕ ವಿಧಾನ ಸಭೆ

ಬುಧವಾರ ೭ನೇ ಮಾರ್ಚ್ ೧೯೮೪

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ಚುಕ್ಕಿ ಗುರುತಿನ ಪ್ರಶ್ನೆಗಳಿಗೆ
ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕೃಷಿ ವಿಶ್ವವಿದ್ಯಾನಿಲಯವೊಂದರ ಪ್ರಾರಂಭ

೪೧೯(೮೩೭) ಶ್ರೀ ಸಂಗಮೇಶ್ವರ ಸರ್‌ದಾರ್ (ರಾಯಚೂರು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಸರ್ಕಾರದವರು ರಾಯಚೂರು ನಗರದಲ್ಲಿ ಕೃಷಿ ಮಹಾ ವಿದ್ಯಾಲಯವನ್ನು ಸ್ಥಾಪಿಸುವ ಯೋಜನೆ ಸರ್ಕಾರದವರಲ್ಲಿದೆಯೆ ?

ಆ) ಹಾಗಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಎಸ್. ರೇವಣ್ಣ (ಕೃಷಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಂಗಮೇಶ್ವರ ಸರ್‌ದಾರ್.—ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲು ಎಲ್ಲ ಅನುಕೂಲಗಳೂ ಸಹ ಇವೆ. ಆದ್ದರಿಂದ ಯಾವ ಜಿಲ್ಲೆಯಲ್ಲಿ ಈಗ ಕೃಷಿ ವಿಶ್ವವಿದ್ಯಾಲಯ ಇದೆಯೋ ಅಲ್ಲಿಯೇ ಮತ್ತೊಂದನ್ನು ಸ್ಥಾಪನೆ ಮಾಡುವುದಕ್ಕೆ ಬದಲು ರಾಯಚೂರು ನಗರದಲ್ಲಿ ಸ್ಥಾಪನೆ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ ಇನ್ನೊಂದು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವ ಕಾಲಕ್ಕೆ ಅದು ನಮ್ಮ ರಾಯಚೂರು ನಗರಕ್ಕೆ ಬರಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಎಸ್. ರೇವಣ್ಣ.—ಮತ್ತೊಂದು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವ ಸಂದರ್ಭ ಬಂದಾಗ ಮಾನ್ಯ ಸದಸ್ಯರ ಸಲಹೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಶ್ರೀ ಬಸವನಗೌಡ ಪಾಟೀಲ್.—ಧಾರವಾಡದಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ ಆಗಬೇಕೆಂಬ ಬೇಡಿಕೆ, ಹಲವಾರು ವರ್ಷಗಳಿಂದ ಇದೆ. ಆ ಜಿಲ್ಲೆ ಮುಂಬೈ ಕರ್ನಾಟಕದಲ್ಲಿದ್ದಾಗ ಒಂದು ಕೃಷಿ ಕಾಲೇಜು ಶ್ರೀ ಎಂ.ಬಿ.ಪಾಟೀಲರ ಒಂದು ನೇತೃತ್ವದಲ್ಲಿ ಸ್ಥಾಪನೆಯಾಯಿತು. ಈಗ ಅಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ರೇವಣ್ಣ.—ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ವಿಷಯ ಬಂದಾಗ ಧಾರವಾಡ ನಗರವನ್ನೂ ಸಹ ಗಣನೆಗೆ ತೆಗೆದುಕೊಳ್ಳಲ್ಲಾಗುವುದು.